**ಸಾಕ್ಷಿಯನ್ನು ದಿನಾಂಕಃ 27.03.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀಸವಾಲುಃ ಪ್ರತಿವಾದಿ ಪರ ಶ್ರೀ ಬಿ.ವೈ, ವಕೀಲರಿಂದಃ**

ನಿಪಿ-24 ರಿಂದ 37 ನ್ನು ವಾದಿ ಈಗಾಗಲೇ ಈ ಹಿಂದಿನ ಪ್ರಕರಣದಲ್ಲಿ ಹಾಜರುಪಡಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾಖಲೆಗಳನ್ನು ಪರಿಶೀಲಿಸಿದ ನಂತರವೇ ನ್ಯಾಯಾಲಯವು ತೀರ್ಪು ನೀಡಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ತೀರ್ಪಿನ ವಿರುದ್ಧ ವಾದಿ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಮೇಲ್ಮನವಿಯೂ ಕೂಡ ವಜಾ ಆಗಿದ್ದು, ನಂತರ 2 ನೇ ಮೇಲ್ಮನವಿ ಹಾಕಿರುವ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನಲ್ಲಿ ಪ್ರತಿವಾದಿ ಕಾಂಪೌಂಡ್ ನಿರ್ಮಿಸಿ ಅದರಲ್ಲಿ ಒಂದು ಚಿಕ್ಕ ಕೊಠಡಿ ನಿರ್ಮಿಸಿದ್ದು, ಅದನ್ನು ನಾನು ದಬ್ಬಾಳಿಕೆಯಿಂದ ಪ್ರತಿವಾದಿ ಇಲ್ಲದಿರುವ ಸಮಯವನ್ನು ನೋಡಿ ನಾಶಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಈ ವಿಚಾರವಾಗಿ ಪ್ರತಿವಾದಿ ನನ್ನ ವಿರುದ್ಧ ದೂರು ನೀಡಿದ್ದು, ಪೊಲೀಸ್ ಠಾಣೆಯಲ್ಲಿ ನನ್ನ ವಿರುದ್ಧ ಪ್ರಥಮ ವರ್ತಮಾನ ವರದಿ ದಾಖಲಾಗಿರುತ್ತದೆ ಎಂದರೆ ಪ್ರಥಮ ವರ್ತಮಾನ ವರದಿ ದಾಖಲಾಗಿರುತ್ತದೆ, ಅದನ್ನು ಮಾನ್ಯ ಗೌರವಾನ್ವಿತ ಉಚ್ಛ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿದ್ದು, ನ್ಯಾಯಾಲಯವು ತಡೆಯಾಜ್ಞೆ ನೀಡಿರುತ್ತದೆ. ಪ್ರತಿವಾದಿ ನನ್ನ ವಿರುದ್ಧ ಶಾಶ್ವತ ನಿರ್ಬಂಧಕಾಜ್ಞೆ ಕೋರಿ ಸಿವಿಲ್ ದಾವೆಯನ್ನು ಕೂಡ ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ನನ್ನ ವಿರುದ್ಧ ಏಕಪಕ್ಷೀಯಾ ತಾತ್ಕಲಿಕ ತಡೆಯಾಜ್ಞೆಯಾಗಿರುತ್ತದೆ ಎಂದರೆ ಸರಿ. ಸುಧಾಮಣಿಯವರ ಕ್ರಯಪತ್ರವನ್ನು ಹಾಜರುಪಡಿಸಿರುತ್ತೇನೆ. ಸದರಿ ಸುಧಾಮಣಿಯವರು ಪ್ರತಿವಾದಿಯ ವಿರುದ್ಧ ಶಾಶ್ವತ ನಿರ್ಬಂಧಕಾಜ್ಞೆ ಆದೇಶವನ್ನು ಉಲ್ಲಂಘಿಸಿರುತ್ತಾರೆಂದು ಅಮಲ್ಜಾರಿ ಅರ್ಜಿ ಸಂಖ್ಯೆ 60/2012 ರಂತೆ ಅರ್ಜಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ರಕರಣದಲ್ಲಿ

ವಿಚಾರಣೆಯಾಗಿ ಯಾವ ಆದೇಶವಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ಅಮಲ್ದಾರಿ ಅರ್ಜಿ ವಜಾ ಆಗಿರುವ ವಿಚಾರ ನನಗೆ ಗೊತ್ತಿರುತ್ತದೆ ಎಂದರೆ ಸರಿಯಲ್ಲ. ಅಸ್ತಿತ್ವದಲಿಲ್ಲದಿರುವ ಆಸ್ತಿಗೆ ಸಂಬಂಧಿಸಿದಂತೆ ವಾದಿ ಮತ್ತು ಪೂರ್ವ ಮಾಲೀಕರು ಸೇರಿ ಕ್ರಯಪತ್ರಗಳು ಮತ್ತು ಇತರೆ ಕಂದಾಯ ಪತ್ರಗಳನ್ನು ಸೃಷ್ಟಿ ಮಾಡಿಕೊಂಡಿದ್ದು, ಆ ರೀತಿ ಸೃಷ್ಟಿ ಮಾಡಿಕೊಂಡ ದಾಖಲೆಗಳ ಆಧಾರದ ಮೇಲೆ ದಾವಾ ಸ್ವತ್ತಿನ ಮೇಲೆ ಯಾವುದೇ ರೀತಿ ಹಕ್ಕು, ಹಿತಾಸಕ್ತಿ ಇಲ್ಲದಿದ್ದರೂ ಅಸ್ತಿತ್ವದಲ್ಲಿಲ್ಲದೇ ಇರುವ ಆಸ್ತಿಯ ಮೇಲೆ ಹಕ್ಕು ಘೋಷಣೆ ಕೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈಗ ನನಗೆ ತೋರಿಸುತ್ತಿರುವ ಭಾವಚಿತ್ರದಲ್ಲಿ ಕಾಣುವ ಗೋಪಿ ಬಣ್ಣ ಲೇಪಿಸಿರುವ ಕಟ್ಟಡ ಉಪ್ಪಾರ ಸಮುದಾಯದ ಹಾಸ್ಟೆಲ್ ಕಟ್ಟಡವಾಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಸದರಿ ಭಾವಚಿತ್ರದಲ್ಲಿ ಕಾಣುವ ಹಾಸ್ಟೆಲ್ ಕಟ್ಟಡವನ್ನು ನೋಡಿ ಒಪ್ಪಿ ಗುರುತಿಸಿದ್ದರಿಂದ, ಅದನ್ನು ನಿಡಿ-36 ಎಂದು ಗುರುತಿಸಲಾಯಿತು. ನಿಡಿ-36 ರಲ್ಲಿ ಕಾಣುವ ಕಬ್ಬಿಣದ ಗೇಟ್ ಮತ್ತು ಕಾಂಪೌಂಡ್ ಇರುವ ನಿವೇಶನ ಸ್ವತ್ತಾಗಿರುತ್ತದೆ ಎಂದರೆ ಸರಿ. ನಿಡಿ-36 ರಲ್ಲಿ ಕಾಣುವ ಕಾಂಪೌಂಡ್ ಇರುವ ಆಸ್ತಿಗೆ ಸಂಬಂಧಿಸಿದಂತೆ ವಾದಿಗಾಗಲಿ ಅಥವಾ ಅವರ ಪೂರ್ವ ಮಾಲೀಕರಿಗಾಗಲಿ ಯಾವುದೇ ಹಕ್ಕು, ಹಿತಾಸಕ್ತಿ ಇರುವುದಿಲ್ಲ ಮತ್ತು ಅವರು ಯಾವತ್ತೂ ಕೂಡ ಆ ನಿವೇಶನದಲ್ಲಿ ಸ್ವಾಧೀನದಲ್ಲಿಲ್ಲ ಎಂದರೆ ಸರಿಯಲ್ಲ. ನಿಡಿ-36 ರಲ್ಲಿ ಕಾಣುವ ಗೇಟ್ ಮತ್ತು ಕಾಂಪೌಂಡ್ ಇರುವ ವಿವಾದಿತ ಸ್ವತ್ತಿನ ಪಶ್ಚಿಮಕ್ಕೆ ಬೆಂಗಳೂರು-ಊಟಿ ರಸ್ತೆ ಇರುತ್ತದೆ ಎಂದರೆ ಸರಿ. ಸ್ಥಿರಾಸ್ತಿಗಳ ಬೆಲೆ ಇತ್ತೀಚೆಗೆ ಹೆಚ್ಚಾಗಿರುತ್ತದೆ ಎಂದರೆ ಸರಿ. ಈ ರೀತಿ ಸ್ಥಿರಾಸ್ತಿಗಳ ಬೆಲೆ ಹೆಚ್ಚಾಗಿರುವುದರಿಂದ ಪ್ರತಿವಾದಿಗೆ ಸೇರಿದ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ಈ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ವಿವಾದಿತ ಸ್ವತ್ತಿನ ಬಗ್ಗೆ ಈಗಾಗಲೇ ನ್ಯಾಯಾಲಯ ತೀರ್ಪು ನೀಡಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

**ಮರುವಿಚಾರಣೆಃ** ಇರುವುದಿಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

ಸಹಿ/-

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ,**

**ನಂಜನಗೂಡು.**